(೧೬) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಗ್ಮೈ ಮಾಡಿಕೊಂಡ ಜಮೀನನ್ನು ಖಾಯಂಗೊಳಿಸುವುದು

ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಬಡ ಕೃಷಿ ಕಾರ್ಮಿಕರು, ಹಿಂದುಳಿದ ವರ್ಗದವರು ಪರಿಶಿಷ್ಟ ಜಾತಿ, ಜನಾಂಗದವರು ಬಹಳಷ್ಟು ಜನರು ಕೆಲವು ವರ್ಷಗಳಿಂದ ಅಗ್ಮೈ ಮಾಡಿ ಮನೆ ಆಡಿ ಸ್ಥಳ ಪಾಗೂ ಇನ್ನಿತರ ಅಲ್ಪಸ್ವಲ್ಪ ಕೃಷಿಗಳನ್ನು ಮಾಡಿಕೊಂಡು ಬಂದಿದ್ದರೂ ಸರಕಾರ ಕಳೆದ ೩-೪ ವರ್ಷಗಳಿಂದ ಅಗ್ಮೈದಾರರ ಅಗ್ಮೈ ಸ್ಥಳವನ್ನು ಖಾಯಂ ಮಾಡುತ್ತೇವೆ ಎಂದು ಹೇಳುತ್ತಾ ಬಂದರೂ, ಈ ತನಕ ಈ ಅಗ್ಮೈದಾರರ ಜಮೀನನ್ನು ಖಾಯಂಗೊಳಿಸುವ ಕಾರ್ಯಕ್ರಮ ಏನೂ ಕಂಡುಬರುವುದಿಲ್ಲ. ಬಡ ಭೂ ರಹಿತ ಜನರಿಗೆ ಒತ್ತುವರಿ ಜಮೀನು (ಕುಷ್ಕಿ) ಸುಮಾರು ೧-೧½ ಎಕರೆ ಜಮೀನು ಅಗ್ಮೈ ಮಾಡಿ ಮನೆ ಕಟ್ಟಿಕೊಂಡು ಬಂದವರನ್ನು ಸರಕಾರ ಖಾಯಂ ಮಾಡುವ ಆಜ್ಞೆಯನ್ನು ಈ ಹಿಂದೆಯೇ ತಂದಿದ್ದರೂ, ಈ ಆದೇಶ ತಾಲ್ಲೂಕು ಕಚೇರಿಗಳಿಗೆ ತಲುಪದೆ, ಈಗಲೂ ಕೆಲವು ಒತ್ತುವರಿ ಜಮೀನು (ಕುಷ್ಕಿ) ತಾಣೆಮಣೆ ಎಂದು ಗ್ರಾಮಾಂತರ ಪ್ರದೇಶದ ಬಡ ಅಗ್ಮೈದಾರರನ್ನು ಎವಿಕ್ಷನ್ ಮಾಡುತ್ತಾ ತಾಲ್ಲೂಕು ತಹಶೀಲ್ದಾರರು ಬರುತ್ತಿದ್ದಾರೆ. ಮತ್ತು ಈ ಹಿಂದೆ ನಗರ ಪಂಚಾಯತ್ ಕ್ಷೇತ್ರದ ಗ್ರಾಮಗಳಲ್ಲಿ ಸರಕಾರಿ ಜಮೀನು ಅಗ್ಮೈ ಮಾಡಿ ಅನುಭವಿಸಿಕೊಂಡು ಬರುತ್ತಿದ್ದ ಅಗ್ಮೈದಾರರ ಕಡತಗಳು ಬಾಕಿ ಇದ್ದು, ಈ ನಗರ ಪಂಚಾಯತ್‌ಗಳು ಪುರಸಭೆಯಾಗಿ ಪರಿವರ್ತಿಸಿ (ಸರಕಾರಿ ಆಜ್ಞೆಯಂತೆ) ದರಿಂದಲೂ, ಆಗಿನ ಅಗ್ಮೈದಾರರ ಅಗ್ಮೈ ಖಾಯಂಗೆ ಕಾನೂನಿನ ತೊಂದರೆ ಇದ್ದು, ಎಷ್ಟೋ ಅರ್ಜಿಗಳು ಹಾಗೇ ಇವೆ. ಈಗ ಈ ಪುರಸಭೆ ಮಂಡಲ ಪಂಚಾಯತ್ ಆಗಿ ಪರಿವರ್ತನೆಗೊಂಡಿರುವುದರಿಂದ, ಆಗಿನ ಅಗ್ಮೈದಾರರ ಅಗ್ಮೈಯನ್ನು ಮಂಜೂರು ಮಾಡುವಂತೆ ಕ್ರಮ ಕೈಗೊಳ್ಳುವುದು ಮತ್ತು ಬಡ ಕೃಷಿ ಕಾರ್ಮಿಕರು, ಪರಿಶಿಷ್ಟ ಜಾತಿ, ಜನಾಂಗದವರು, ಹಿಂದುಳಿದ ಅವಿದ್ಯಾವಂತರು ಸರಕಾರಿ ಸ್ಥಳದಲ್ಲಿ ಅಗ್ಮೈ ಮಾಡಿದ ಬಗ್ಗೆ ನಿರ್ದಿಷ್ಟ ಅವಧಿಯಲ್ಲಿ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದರೂ ಎಷ್ಟೋ ಅವಿದ್ಯಾವಂತರು ಬಡ ಕುಟುಂಬಗಳು ಸರಿಯಾದ ಅನುಭವ ಇಲ್ಲದೆ ಅರ್ಜಿ ಸಲ್ಲಿಸಲು ಇನ್ನೂ ಬಾಕಿ ಇರುವುದು. ಆಂತಹ ಜನರಿಗೆ ಅರ್ಜಿ ಸಲ್ಲಿಸಲು ಸರಿಯಾದ ಪ್ರಕಟಣೆಯೊಂದಿಗೆ ಇನ್ನೂ ಹೆಚ್ಚು ಕಾಲಾವಕಾಶವನ್ನು ಕೊಡುವಂತಾಗಬೇಕು.

ಎಲ್ಲಾ ರೀತಿಯಿಂದ ಅಗ್ಮೈ ಮಾಡಿದ ಬಡಜನರ ಅಗ್ಮೈಯನ್ನು ಕೂಡಲೇ ಸರಕಾರ ಖಾಯಂ ಗೊಳಿಸುವ ಕ್ರಮವನ್ನು ಕೈಕೊಂಡು ಅಗ್ಮೈದಾರ ಬಡ ಜನರು ಹುಲ್ಲಿನ, ಭಾಗ್ಯ ಮಂದಿರ ಮನೆ ಗಳನ್ನು ಪಡೆಯಲು ಮತ್ತು ಸ್ವಲ್ಪ ಕೃಷಿ ಸಾಗುವಳಿದಾರರ ಜಮೀನಿಗೆ ಪಕ್ಕ ಪತ್ರ ಪಡೆದು ಕೃಷಿ ಉಪಕರಣ, ಪಂಪುಸೆಟ್ಟು, ಸಾಲ ಮೈರೆ ಪಡೆಯಲು ಅನುಕೂಲವಾಗುವಂತೆ ಕ್ರಮವನ್ನು ಕೂಡಲೇ ಕೈಕೊಳ್ಳುವಂತೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಕೆ. ಕುಶಾಲರವರು ಯಾವ ಯಾವ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೋ ಆ ಕೆಲಸಗಳನ್ನು ಮಾಡುವುದಕ್ಕೆ ಈಗಾಗಲೇ ಬಿಲ್ ಇಂಟ್ರಡ್ಯೂಸ್ ಆಗಿದೆ. ಇದರಲ್ಲಿ ಪರಿಹಾರ ಸಿಕ್ಕುತ್ತದೆಂದು ತಮ್ಮ ಮುಖಾಂತರ ಅವರಿಗೆ ತಿಳಿಸಲು ಇಚ್ಛಿಸುತ್ತೇನೆ.

(೧೭) ಕುರುಂಬ ಪರದೇಶಿ ನಾಯಕ ಮತ್ತು ನಾಯ್ಕ ಜಾತಿಗಳನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಿ ಸೌಲಭ್ಯಗಳನ್ನು ಕೊಡುವುದು

ಶ್ರೀ ಕೆ.ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ ಕುರುಂಬ, ಪರದೇಶಿ, ನಾಯಕ, ನಾಯ್ಕ ಮೊದಲಾದ ಐದು ಜಾತಿಗಳು ಪರಿಶಿಷ್ಟ ವರ್ಗಕ್ಕೆ ಸೇರಿದವರೆಂದು ಸರಕಾರ ಒಪ್ಪಿ ಈ ಬಗ್ಗೆ ಕೇಂದ್ರ ಸರಕಾರಕ್ಕೆ ರಾಜ್ಯ ಸರಕಾರ ಶಿಫಾರಸ್ಸು ಮಾಡಿದೆ. ಈ ಮಧ್ಯೆ ಈ ಜಾತಿಗಳ ಜನರಿಗೆ ಶಿಕ್ಷಣ ಮತ್ತಿತರ ವಿಷಯ ಗಳಲ್ಲಿ ಪರಿಶಿಷ್ಟ ವರ್ಗಗಳ ಸೌಲಭ್ಯಗಳನ್ನು ಕೊಡುವುದಾಗಿ ಮಂತ್ರಿಗಳು ತಿಳಿಸಿದ್ದಾರೆ. ಆದರೆ ಈ ಬಗ್ಗೆ ಸರಕಾರ ಏನಾದರೂ ಆಜ್ಞೆ ಹೊರಡಿಸಿ ಅಗತ್ಯವಾದ ಸುತ್ತೋಲೆಗಳನ್ನು ಕಳುಹಿಸಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಶಾಲೆಗಳಲ್ಲಿ ಈ ಜಾತಿಯ ವಿದ್ಯಾರ್ಥಿಗಳಿಗೆ ಪರಿಶಿಷ್ಟ ಜಾತಿಗಳಿಗೆ ಕೊಡ ಲಾಗುತ್ತಿರುವ ಸೌಕರ್ಯಗಳು ದೊರೆಯುತ್ತಿಲ್ಲ. ಇದರಿಂದ ಈ ಬಡ ಜನಾಂಗದ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಸರಕಾರ ಈ ಬಗ್ಗೆ ಸೂಕ್ತ ಆಜ್ಞೆಗಳನ್ನು ಕೂಡಲೇ ಹೊರಡಿಸಬೇಕು. ಇದು ಸಾರ್ವಜನಿಕರ ಹಿತದ ತುರ್ತು ಪ್ರಶ್ನೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ ನಾಯಕ್ ಮತ್ತು ನಾಯಕ ಈ ಜನಾಂಗದವರು ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನಲ್ಲಿ ಇದ್ದಾರೆ. ಆದರೆ ಅವರಲ್ಲಿ ನಾಯಕ, ನಾಯಕ್ಸ್, ಬೇಡ, ಪರಿವಾರ, ತಳವಾರ ಎಂಬ ಸಿನಾನಿಮ್ಸ್. ಕ್ಲಾರಿಫಿಕೇಷನ್‌ಗಾಗಿ ಭಾರತ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೆವು, ಭಾರತ ಸರ್ಕಾರದ ಒಪ್ಪಿಗೆಯ ನಿರೀಕ್ಷಣೆಯ ಮೇರೆಗೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಶೈಕ್ಷಣಿಕ ರಿಯಾಯಿತಿಯನ್ನು ಕೊಡಲು ಸರ್ಕಾರ ಈಗಾಗಲೇ ಸರ್ಕುಲೇಷನ್ ಕೊಟ್ಟು ಈ ಸೌಲಭ್ಯಗಳು ಸಿಗುವಂತೆ ವ್ಯವಸ್ಥೆಯನ್ನು ಮಾಡಲಾಗಿದೆ.

(೧೮) ರಾಜ್ಯದಲ್ಲಿ ಹೋಬಳಿ ಮಟ್ಟದಲ್ಲಿ ಬಡವರ್ಕಳಿಗೆ ವಸತಿ ಶಾಲೆಗಳನ್ನು ತೆರೆಯುವುದು

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಹಳ್ಳಿಗಾಡುಗಳಲ್ಲಿ ತಾಂಡವಾಡುತ್ತಿರುವ ದಾರಿದ್ರ್ಯ ಹಸಿವಿನಿಂದಾಗಿ ಶೇಕಡ ೯೫ರಷ್ಟು ಮಕ್ಕಳು ಶಾಲೆಯನ್ನೇ ಕಾಣುತ್ತಿಲ್ಲ. ಸರ್ಕಾರ ೫೫ ವರ್ಷ ತುಂಬಿದ ಮಕ್ಕಳಿಗಾಗಿ ಇಡೀ ಕರ್ನಾಟಕದಲ್ಲಿ ೧೨೫ ವಸತಿ ಶಾಲೆಗಳನ್ನು ನಡೆಸುತ್ತಿದೆ. ಇವುಗಳಲ್ಲಿ ಸುಮಾರು ೪,೦೦೦ ವಿದ್ಯಾರ್ಥಿಗಳಿದ್ದಾರೆ. ೭೬೫ ಮಹಿಳಾ ಕೇಂದ್ರಗಳಿದ್ದು ಇದರಲ್ಲಿ ಸುಮಾರು ೪೦,೦೦೦ ಮಕ್ಕಳಿಗೆ ಮಾತ್ರ ವಿದ್ಯೆಯ ವ್ಯವಸ್ಥೆಯಿದೆ. ಆದ್ದರಿಂದ ಹಳ್ಳಿಗಾಡಿನ ಬಡ ಮಕ್ಕಳಿಗೆ ಸಮ್ಮವಸ್ಥಿತವಾದ ಶಿಕ್ಷಣವು ದೊರಕಬೇಕಾದರೆ ಪ್ರತಿ ಹೋಬಳಿಗೊಂದು ಕನಿಷ್ಟ ೧೦೦ ಮಕ್ಕಳಿಗೆ ಪಾಥಮಿಕ ಶಿಕ್ಷಣ ನೀಡುವ ವಸತಿ ಶಾಲೆಯನ್ನು ಸರ್ಕಾರ ತೆಗೆಯಬೇಕು. ಇದರ ಬಗ್ಗೆ ಸರ್ಕಾರವು ಸಮಗ್ರವಾದ ಗ್ರಾಮೀಣ ಶಿಕ್ಷಣ ಯೋಜನೆಯೊಂದನ್ನು ರೂಪಿಸುವುದು ಅತ್ಯಗತ್ಯ ಎಂದು ಸರ್ಕಾರವನ್ನು ಒತ್ತಾಯಿಸಿ ಇದರ ಬಗ್ಗೆ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ಇಂಥ ಶಾಲೆಗಳನ್ನು ತೆರೆಯಲು ಪರಿಶೀಲನೆ ಮಾಡುತ್ತೇನೆ. ಆದರೆ ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಒಂದೊಂದು ವಸತಿ ಶಾಲೆಯನ್ನು ಮಾಡಬೇಕೆಂದು ಇದ್ದೇವೆ. ಹೋಬಳಿ ಮಟ್ಟದಲ್ಲಿ ಮಾಡಬೇಕೆಂದರೆ ಕಷ್ಟವಾಗುತ್ತದೆ. ಆದರೂ ಈ ವಿಚಾರವನ್ನು ಪರಿಶೀಲನೆ ಮಾಡುತ್ತೇನೆಂಬುದಾಗಿ ಹೇಳುತ್ತೇನೆ.

(೧೯) ಬಂಟ್ವಾಳ ತಾಲ್ಲೂಕಿನಲ್ಲಿ ನದಿಗಳ ಪ್ರವಾಹದಿಂದ ಹಾನಿಯುಂಟಾಗಿರುವುದು

ಶ್ರೀ ಬಿ.ಎ. ಉಮರಬ್ಬ (ವಿಟ್ಲ).—ಆಗಸ್ಟ್ ೨ನೇ ವಾರದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಭಾರಿ ಮಳೆ ಬಂತು. ಇದರ ಪರಿಣಾಮವಾಗಿ ಜಿಲ್ಲೆಯ ನದಿಗಳೆಲ್ಲಾ ಪ್ರವಾಹ ಭರಿತವಾದವು. ಈ ಮಳೆ ಮತ್ತು ಪ್ರವಾಹದ ಪರಿಣಾಮವಾಗಿ ಅನೇಕ ಕಡೆ ರಸ್ತೆಗಳು ನದಿ ದಂಡೆಗಳು, ಅಪಾರ ಹಾನಿಗೆ ತುತ್ತಾದವು.

ಈ ಹಾನಿ ಹೆಚ್ಚಿನ ಪ್ರಮಾಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ಸಂಭವಿಸಿದೆ. ತಕ್ಷಣ ಸ್ಥಳಕ್ಕೆ ಧಾವಿಸಿ ಬಂದ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಪರಿಸ್ಥಿತಿಯ ಗಂಭೀರತೆಯ ಬಗ್ಗೆ ಈಗಾಗಲೇ ಸರಕಾರದ ಗಮನ ಸೆಳೆದಿರಬಹುದೆಂದು ಭಾವಿಸಿದ್ದೇನೆ. ಅನೇಕ ರಸ್ತೆಗಳು ಹಾನಿಗೆ ತುತ್ತಾಗಿದೆ. ಉದಾಹರಣೆಗೆ:

೧) ಮಾಣಿ ಉಳ್ಳಾಲ ರಸ್ತೆ. ೨) ಶಂಬೂರು–ಬಾಳ್ತಿಲ ರಸ್ತೆ, ೩) ಬ್ರಂಹಾವರ ಕೊಟ್ಟಾ ಜಾಗದ ಗಡ್ಡೆ ರಸ್ತೆ,

ಇತ್ಯಾದಿಗಳು ಅಂತೆಯೇ ಕೆಲವಾರು ಕಡೆ ನೇತ್ರಾವತಿ ನದಿಯ ದಂಡೆಗಳು ಸಹಾ ಕುಸಿತಕ್ಕೆ ಒಳಗಾಗಿವೆ.

ಬಂಟ್ವಾಳ ಪುರಸಭೆಯ ವ್ಯಾಪ್ತಿಯಲ್ಲಿಯೂ ಸಹ ಈ ಮಳೆ ಮತ್ತು ಪ್ರವಾಹ ಅಪಾರ ಹಾನಿಯನ್ನುಂಟು ಮಾಡಿದೆ. ಈ ಹಾನಿಗಳ ತುರ್ತು ದುರಸ್ತಿ ತುಂಬಾ ಅವಶ್ಯಕ ಎಂಬುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಸಚಿವರು).—ಸನ್ಮಾನ್ಯ ಸದಸ್ಯರಾದ ಉಮರಬ್ಬನವರು ಪ್ರಸ್ತಾಪಿಸಿರುವ ಹಾನಿಯ ಬಗ್ಗೆ ಅಗತ್ಯ ದುರಸ್ತಿ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.